ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಉದಯಕುಮಾರ್ ಸೂರ್ಯಪ್ರಕಾಶ್ ಲಕ್ಷ್ಮಣ ಮತ್ತು ಯೋಗೇಶ್ ರವರಿಂದ 1 ಲಕ್ಷದ 37 ಸಾವಿರ ಹಣವನ್ನು ಚೋಳೂರಯ್ಯ, ಗಂಗಾಧರ ಮತ್ತು ನವೀನ್ ಪಡೆದುಕೊಂಡಿರುತ್ತಾರೆ. ಲಕ್ಷ್ಮಣ ರವರಿಂದ 25 ಸಾವಿರ ಹಣ ಚೆಕ್ ಮತ್ತು 17 ಸಾವಿರ ಕ್ಯಾಸ್, ಯೋಗೇಶ್ ರವರಿಂದ 35 ನಗದು ಹಣ, ಸೂರ್ಯಪ್ರಕಾಶ್ ರವರಿಂದ 35 ಸಾವಿರ ನಗದು ಮತ್ತು ಉದಯಕುಮಾರ್ ರವರಿಂದ 35 ಸಾವಿರ ತೆಗೆದುಕೊಂಡಿರಬಹುದು. ಆ ದಿನ ನಾನು ಸ್ಥಳದಲ್ಲಿ ಇದ್ದೆನು. ಹಣ ಪಡೆದುಕೊಂಡಿರುವ ಬಗ್ಗೆ ಸಾಕ್ಷಿದಾರರನಾಗಿ ಸಹಿ ಮಾಡಲಿಲ್ಲ. ಮೇಲೆ ಹೇಳಿದಂತೆ ನನ್ನ ಮುಂದೆ ಆ ರೀತಿ ಹಣವನ್ನು ಕೊಟ್ಟಿಲ್ಲ ವಾದಿ ಹೇಳು ಎಂದು ಹೇಳಿರುವುದಕ್ಕೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಹಣವನ್ನು ಪಡೆದುಕೊಡು ಹೋದು ಆದರೆ ಷರಾದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಷರಾದಲ್ಲಿ ಬರೆದಿರುವ ವಿಚಾರ ಮತ್ತು ಹಣಕಾಸಿನ ವಿಚಾರ ಯಾವುದೂ ನನಗೆ ಗೂತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮತ್ತೆ ಪುನಃ 2 ಲಕ್ಷ ಹಣವನ್ನು ತೆಗೆದುಕೊಂಡಿದ್ದಾರೆ ಆದರೆ ದಿನಾಂಕ ನೆನಪಿಲ್ಲ. ಮತ್ತೆ ಪುನಃ 30 ಸಾವಿರ ಹಣವನ್ನು ಪಡೆದುಕೊಂಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಅಗ್ರಿಮೆಂಟ್ ಮಾಡಿಕೊಳ್ಳುವ ಮುಂಚೆ ಮೇಲೆ ಹಣ ಪಡೆದುಕೊಂಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 28.02.2011ರಂದು 30 ಸಾವಿರ ಹಣವನ್ನು 3ನೇ ಪ್ರತಿವಾದಿ

ಪಡೆದುಕೊಂಡಿದ್ದಾರೆ ಎಂದು ಹೇಳಿದ್ದೇನೆ ಆ ಸಂದರ್ಭದಲ್ಲಿ ತಾವು ಹಾಜರಿದ್ದೀರಾ ಎಂದರೆ ಸಾಕ್ಷಿಯು ಹೌದು ನಾನು ಹಾಜರಿದ್ದೆನು ಎಂದು ನುಡಿಯುತ್ತಾರೆ. ಆ ದಿನ ಯಾವುದೇ ಸಾಕ್ಷಿ ಮಾಡಿಲ್ಲ. ನಾನು ಸ್ಥಳದಲ್ಲಿ ಇದ್ದುದ್ದರಿಂದ ಹೇಳುತ್ತಿದ್ದೇನೆ. ಯಾವ ಸ್ಥಳ ಎಂದು ನನಗೆ ಈಗ ಸರಿಯಾಗಿ ನೆನಪಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿ ಹೆಸರು ನವೀನ್. ಹಣವನ್ನು ನವೀನ್ ತೆಗೆದುಕೊಂಡಿರುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ಮತ್ತು 6ನೇ ಪ್ರತಿವಾದಿ ಹಣ ಪಡೆದುಕೊಂಡ ದಿನ ನಾನು ಇದ್ದೆನು. 5 ಮತ್ತು 6ನೇ ಪ್ರತಿವಾದಿಗಳ ಹೆಸರು ಗಂಗಾಧರ ಮತ್ತು ನವೀನ್. ಸಾಕ್ಷಿಗೆ ನಿಪಿ-1ನ್ನು ತೋರಿಸಿ ಇರದಲ್ಲಿ 2 ಲಕ್ಷದ ಷರಾ ಎಲ್ಲಿ ಇದೆ ಎಂದು ಕೇಳಿದಾಗ ಸಾಕ್ಷಿಯು ಅದರಲ್ಲಿ ಇರುವ ಷರಾವನ್ನು ತೋರಿಸುತ್ತಾರೆ. ಷರಾದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಈ ವಿಚಾರ ನನಗೆ ಗೊತ್ತಿಲ್ಲದೇ ಇದ್ದರೂ ಸಹ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಒಟ್ಟು 13 ಲಕ್ಷದ 67 ಸಾವಿರ ಹಣವನ್ನು ಪಡೆದಿರುತ್ತಾರೆ ಎಂದು ಪ್ಯಾರಾ 15ರಲ್ಲಿ ಬರೆದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾದಿಗಳ ಮಾತು ಕೇಳಿದ ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪುನಃ 20 ಸಾವಿರ ಹಣ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 20

ಸಾವಿರ ಹಣ ಪಡೆದುಕೊಂಡಿರುವ ಬಗ್ಗೆ ಷರ ಬರೆದಿಲ್ಲ. ಪ್ರತಿವಾದಿಗಳು ಯಾವುದೇ ಹಣ ಪಡೆಯದೇ ಇದ್ದರೂ ಸಹ ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಪಿ-1ನ್ನು ತೋರಿಸಿ ಇದರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೀರಾ ಎಂದರೆ ಸರಿ. ಪತ್ರವನ್ನು ಟೈಪ್ ಮಾಡಿರುತ್ತೇನೆ ಪತ್ರ ರಚನಾಕರಾರು ಇರುವುದಿಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿ. ಪ್ಯಾರಾ ನಂ. 15 ರಲ್ಲಿ ನಾವು ಹಣ ಕೊಡಲು ತಯಾರಿದ್ದೇವೆ ಎಂದು ಬರೆದಿರುವುದು ಸುಳ್ಳು ಎಂದರೆ ಸರಿಯಲ್ಲ. ಅವರು ಕೊಡಲು ತಯಾರಿದ್ದಾರೆ ಎಂದು ನುಡಿಯುತ್ತಾರೆ. ನಾನು ವಾದಿಗಳ ಜೊತೆ ಭಾಗಿ ಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.